**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

ಸಂಖ್ಯೆ: ರಗೊವಿ/ಎಎಸ್‌ಡಿ/ಯೂರಿಯಾ/2014-15

ಕೃಷಿ ನಿರ್ದೇಶನಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-1.
ದಿನಾಂಕ: 18.07.2014.

ಇವರಿಗೆ:

**ರಾಜ್ಯದ ಎಲ್ಲಾ ರಸಗೊಬ್ಬರ ತಯಾರಕರಿಗೆ**

ವಿಷಯ: ಯೂರಿಯಾ ರಸಗೊಬ್ಬರವನ್ನು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಗೆ ಸರಬರಾಜು ಮಾಡುವ ಬಗ್ಗೆ.

* * * * * * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಎಲ್ಲಾ ಭಾಗಗಳಲ್ಲಿ ಉತ್ತಮ ಮಳೆಯಾಗುತ್ತಿದ್ದು ಈಗಾಗಲೇ ಬಿತ್ತನೆಯಾಗಿರುವ ಪ್ರದೇಶಗಳಲ್ಲಿ ಮತ್ತು ಭತ್ತ ನಾಟಿಮಾಡುತ್ತಿರುವ ಪ್ರದೇಶದಲ್ಲಿ ಮೇಲುಗೊಬ್ಬರವಾಗಿ ಯೂರಿಯಾ ರಸಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ರೈತರು ಬಳಸುತ್ತಿದ್ದಾರೆ. ಇದರಿಂದಾಗಿ ರಾಜ್ಯದೆಲ್ಲೆಡೆ ರೈತರಿಂದ ಯೂರಿಯಾ ರಸಗೊಬ್ಬರಗಳಿಗೆ ತೀವ್ರ ಬೇಡಿಕೆ ಉಂಟಾಗುತ್ತಿದೆ. ಖಾಸಗಿ ಮಾರಾಟಗಾರರು ಈ ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಂಡು ಯೂರಿಯಾ ರಸಗೊಬ್ಬರಗಳನ್ನು ಕಾಳಸಂತೆಯಲ್ಲಿ ಹಾಗೂ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಂಭವವಿರುತ್ತದೆ. ಅಲ್ಲದೆ, ಎಲ್ಲಾ ಭಾಗದ ಗ್ರಾಮಗಳಲ್ಲಿನ ರೈತರಿಗೂ ಯೂರಿಯಾ ರಸಗೊಬ್ಬರ ಪೂರೈಕೆ ಮಾಡಲು ಸಾದ್ಯವಾಗಬೇಕಾದರೆ ಹತ್ತಿರದ ಸಹಕಾರ ಸಂಘಗಳ ಮೂಲಕ ಪೂರೈಕೆ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ. ಆದಕಾರಣ, ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ, ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಯೂರಿಯಾ ರಸಗೊಬ್ಬರ ಪ್ರಮಾಣದಲ್ಲಿ ಕನಿಷ್ಟ **ಶೇ.50 ರಷ್ಟು ಪ್ರಮಾಣವನ್ನು** ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿಗೆ ತಪ್ಪದೇ ಸರಬರಾಜು ಮಾಡಲು ತಿಳಿಸಿದೆ.

ಕೃಷಿ ನಿರ್ದೇಶಕರು

ಪ್ರತಿಯನ್ನು:

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ, ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-52 ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗು ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಕೃಷಿ ನಿರ್ದೇಶಕರು

E:\Naresh\Letter to Manufacturers.doc